ಇರುತ್ತಾಳೆ. ಅದೇ ನನಗೆ ಹಿಡಿಸಲ್ಲ. ಆಗ ಏನೂ ಮಾತನಾಡದೆ ಹೊರಗೆ ಹೋಗಿಬಿಡುವುದನ್ನು ರೂಢಿಸಿಕೊಂಡಿದ್ದೇನೆ.

ಸ್ಕರ್ಟಿನ ಹಿಂದೆ ಅಂಟಿದ ರಕ್ತದ ಕಲೆಯನ್ನು ನೋಡಿ ಭಯಗೊಂಡು ಮನೆಗೆ ಓಡಿ ಬಂದು ಅಳತೊಡಗಿದಾಗ, ನಕ್ಕುಬಿಟ್ಟು ಆ ಕಲೆಯೇನೆಂದು ಹೇಳಿ, "ನೀನಿನ್ನು ಪ್ರತಿ ಸಣ್ಣ ವಿಷಯಕ್ಕೂ ಹಿಂಗ ಅಳತಾ ಕೂಡಬಾರದು. ನೀನೀಗ ದೊಡ್ಡವಳಾದಿ. ನನ ಬಂಗಾರದ ಮಗಳೇ." ಎಂದು ರಮಿಸಿ, ನನಗೆ ಆರತಕ್ಷತೆ ಮಾಡಿಸಿ, ಹೊಸ ಬಟ್ಟೆ ಕೊಡಿಸಿದರೂ ಅವಳಲ್ಲಿ ನನ್ನಮ್ಮ ಕಾಣಿಸಲೇ ಇಲ್ಲ ನನಗೆ. ಏನಾದರೂ ಪರವಾಗಿಲ್ಲ, ನನಗೆ ಅತ್ತೆ ಇದ್ದಾಳಲ್ಲ ಎಂದೆನಿಸುತ್ತಿತ್ತಷ್ಟೇ. ನನಗೊಬ್ಬ ತಮ್ಮ, ಒಬ್ಬ ತಂಗಿ ಎಂದು ಕರೆತಂದಿದ್ದರಾಗ ಅಪ್ಪನೂ, ಅಮ್ಮನೆಂದುಕೊಳ್ಳಲು ಹೇಳಿದ ಆಕೆಯೂ. ಆಕೆಯನ್ನು ಅಮ್ಮನೆಂದೂ, ಅವರನ್ನು ತಮ್ಮ–ತಂಗಿಯೆಂದೂ ನಾನೆಂದಿಗೂ ಕರೆಯಬಾರದು ಎಂದು ತೀರ್ಮಾನಿಸಿದೆ. ಆಕೆ ನನಗೆ ಹೊಸ ಬಟ್ಟೆ ತಂದಿದ್ದಳು. ತಲೆ ಸವರಿದಳು. ನನಗಾಕೆ ಮಲತಾಯಿ. ಮಲತಾಯಂದಿರಿಗೆ ನಾವು ಇಷ್ಟವಿರಲ್ಲ ಎಂದು ಅನೇಕರು ಹೇಳಿದ್ದರು. ಅತ್ತೆಯೂ ಹೇಳಿದ್ದಳು. ಹಾಗಾಗಿ, ಆಕೆ ನನಗೆ ಹೊಸ ಬಟ್ಟೆ ಕೊಟ್ಟರೂ, ತಲೆ ಸವರಿದರೂ ಇಷ್ಟವಾಗಲೇ ಇಲ್ಲ.

"ಮತ್ತೊಂದು ಸಲ ಪ್ರೀತಿಯ ದನಿಯಲ್ಲಿ ಮನದುಂಬಿ ಆಕೆಯನ್ನು ಕರೆಯಿರಿ. ಮಕ್ಕಳ ಕರೆಯು ತಾಯಿಯ ಎದೆಯನ್ನು ಬಡಿದೆಬ್ಬಿಸುತ್ತದೆ. ಹೀಗೆ ಹೇಳಿ, 'ಅಮ್ಮಾ, ನೀನಿಲ್ಲದೆ ನಾವು ಇರಲಾರೆವು. ಈ ಸಮುದ್ರದ ಅಲೆಗಳು ನಮ್ಮನ್ನು ಭಯಗೊಳಿಸುತ್ತಿವೆ' ಅಂತ ಹೇಳಿ" ಎಂದು ತಾಯಿಗಾಗಿ ಮತ್ತೊಂದು ಪ್ರಯತ್ನ ಮಾಡಿಸುತ್ತಿದ್ದಾನೆ ಮರ್ಮೆನ್.

"ನಮ್ಮ ಸಾಗರ ಗರ್ಭ ಸಾಮ್ರಾಜ್ಯದಲ್ಲಿ ಸುವರ್ಣ ಸಿಂಹಾಸನದ ಮೇಲೆ ಮಹಾರಾಣಿಯ ಹಾಗೆ ಕುಳಿತು, ತನ್ನ ಮಡಿಲಲ್ಲಿ ಕಂದಮ್ಮನನ್ನು ಕುಳ್ಳರಿಸಿಕೊಂಡು ಅದರ ತಲೆ ಬಾಚಿದ್ದು ನಿನ್ನೆಯಷ್ಟೇ ಅಲ್ಲವೇ ಆಗಲೇ ಅಲ್ಲವೇ ಚರ್ಚಿನ ಗಂಟೆ ಮೊಳಗಿದ್ದು" ಎಂದು ಮೆಲಕು ಹಾಕಿದ.

ಅನುರಾಧ ಟೀಚರ್ ಯಾವ ಪಾಠ ಮಾಡಿದರೂ ಅದರೊಳಗೆ ಸಂಪೂರ್ಣ ಮುಳುಗಿಬಿಡುತ್ತಾರೆ. ತಾವೇ ಮೆರ್ಮೆನ್ ಆದಂತೆ, ಆ ಮಾನವ ಕಾಂತೆ ತಮ್ಮನ್ನೇ ಬಿಟ್ಟು ಹೊರಟಂತೆ ಗದ್ಗದ ದನಿಯಲ್ಲಿ ಹೇಳುತ್ತಿದ್ದರು. ತಂದೆಯನ್ನೂ, ಮಕ್ಕಳನ್ನೂ ಬಿಟ್ಟು ಹೋದ ಅವಳ ಬಗ್ಗೆ ಮೆರ್ಮೆನ್ ಹೇಳುವ ಮಾತುಗಳು: **"Here came a mortal, but faithless was she"** – ನಾನು ಪಾಠವನ್ನು ತಲ್ಲೀನವಾಗಿ ಕೇಳುತ್ತಿದ್ದೆ. ನನ್ನ ಕೆನ್ನೆಗಳು ಒದ್ದೆಯಾಗುತ್ತಿದ್ದವು. ಪಾಠ ಮುಗಿಯುತ್ತಾ ಬಂತು. ಕೊನೆಯ ಸಾಲು – **"There dwells a loved one, but cruel is she"** – ಟೀಚರ್ ಇನ್ನೂ ಹೇಳುತ್ತಿದ್ದಾಗಲೇ ಗಂಟೆ ಮೊಳಗಿತು. ನಾನು ಪುಸ್ತಕಗಳನ್ನು ಹಿಡಿದು ಒಂದೇ ಜಿಗಿತದಲ್ಲಿ ಹೊರಬಿದ್ದು ಓಡುತ್ತಾ ಮನೆಗೆ ಬಂದೆ.

**But cruel is she.** ಹೌದು! **cruel is she.** ಅತ್ತೆಯೊಡನೆ ಬರುವಾಗ ತಂದಿದ್ದ ಅಮ್ಮನ ಫೋಟೋವನ್ನು ಕೋಪದಿಂದ ನೆಲಕ್ಕೆ ಬೀಸಿ ಎಸೆದೆ. ಮತ್ತೆ ಆ ಕಾಗದವನ್ನು ತೆಗೆದುಕೊಂಡು ಹೋಗಿ ಲ್ಯಾಮಿನೇಷನ್ ಮಾಡಿಸಿ ತಂದೆ. ಇನ್ನೊಮ್ಮೆ ಒಡೆಯಲು ಸಾಧ್ಯವಿಲ್ಲದಂತೆ. ಆದರೆ, ಅದನ್ನು ಪೆಟ್ಟಿಗೆಯ ಅಡಿಯಲ್ಲಿ ಇಟ್ಟುಬಿಟ್ಟಿದ್ದೆ. ತುಂಬಾ ಅತ್ತಿದ್ದೆ. **Cruel is she!** ಅಣ್ಣ ಅಷ್ಟು ದೃಢವಾಗಿ ಹೇಗಿರುತ್ತಾನೆ? ನಾನು ಅವಳಿಗಾಗಿ ಅತ್ತಿದ್ದೇನೆ. ಅವಳು ನನ್ನ ನೆರಳು. ಕೆಲ ಸಲ ನೀಳವಾಗಿ, ಕೆಲ ಸಲ ಕುಳ್ಳವಾಗಿ, ಕೆಲ ಸಲ ಇಲ್ಲವೇ ಇಲ್ಲವೆಂಬಂತೆ ನನ್ನನ್ನು ಹಿಂಬಾಲಿಸುವ ನೆರಳು. ಅವಳು ನನ್ನ ತಾಯಿ. ನನ್ನನ್ನು ತಾಯಿಯಿಲ್ಲದ ಮಗಳನ್ನಾಗಿಸಿದ ತಾಯಿ. ನನ್ನ ಬಾಲ್ಯವನ್ನು ಕಣ್ಣೀರ ಕಡಲಾಗಿಸಿದ ತಾಯಿ. ದಮಯಂತಮ್ಮ ಎಲ್ಲಿಗೆ ಹೋದಳೋ, ಏಕೆ ಹೋದಳೋ ಎಂದು ಸ್ವಲ್ಪ ಸ್ವಲ್ಪವೇ ಅರ್ಥವಾಗತೊಡಗಿದಾಗ ಅಣ್ಣನಿಗೆ ಬರೆದೆ.